**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಬಂಗಾರಪೇಟೆ**

**ಸಿ.ಸಿ.ಸಂಖ್ಯೆಃ 763/2023**

**ಪಿರ್ಯಾದುದಾರರುಃ-** ರಾಜ್ಯ ಪರ ಬಂಗಾರಪೇಟ ರೈಲ್ವೆ ಪೊಲೀಸರು

**ವಿರುದ್ಧ**

**ಆರೋಪಿಗಳು ಃ-**

1. ಮನೋಜ ಕುಮಾರ,
   ಬಿನ್ ರಮೇಶ,
   ಸುಮಾರು 21 ವರ್ಷ,
   ವಾಸಃ 2 ನೆ ಮಹಡಿ,
   ಹೊಲೆ ಸಲೆ ಬಾಬು ಸ್ಟೋರ್ ಹತ್ತಿರ,
   ಮಾಲುರು, ಕೋಲಾರ ಜಿಲ್ಲೆ.

2. ದರ್ಶನ್ ಎಸ್,
   ಬಿನ್ ಶಿಲಿಕುಮಾರ,
   ಸುಮಾರು 20 ವರ್ಷ,
   ವಾಸಃ ಎ.ಡಿ ಕಾಲೋನಿ,
   ಗಾಂಧಿ ಸರ್ಕಲ್,
   ಮಾಲುರು, ಕೋಲಾರ ಜಿಲ್ಲೆ.

**ದೋಷಾರೋಪಣೆ**

ಶ್ರೀ, ಚಂದ್ರಶೇಖರ್ ಅಲಬೂರ್, ಬಿ.ಎ. ಎಲ್.ಎಲ್.ಬಿ. 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ದಿನಾಂಕ 19.09.2022 ರಂದು ಬೆಳಗಿನ ಜಾವ ಪಿರ್ಯಾದುದಾರರು ಚೆನ್ನೈಯಿಂದ ಬೆಂಗಳೂರಿಗೆ ರೈಲುಗಾಡಿ ಸಂಖ್ಯೆ 12657 ಚನ್ನೈ ಮೇಲ್ ಎಕ್ಸ್ ಪ್ರೆಸ್ ರೈಲುಗಾಡಿಯ ಎಸ್ 6 ಬೋಗಿಯ ಬರ್ತ ನಂ 09 ರಲ್ಲಿ ಪ್ರಯಾಣ ಮಾಡಿಕೊಂಡು ಬೆಂಗಳೂರಿಗೆ ಹೋಗುವಾಗ್ಗೆ ರೈಲುಗಾಡಿಯು ಬಂಗಾರಪೇಟೆ ರೈಲ್ವೆ ನಿಲ್ದಾಣದ ವೇದಿಕೆ ನಂ 03 ರಲ್ಲಿ ಬಂದು ನಿಂತಾಗ್ಗೆ ಆರೋಪಿಗಳು ಸದರಿ ರೈಲುಗಾಡಿಯ ಆಪ್ ಸೈಡ್ ನ ಕಿಟಕಿಯ ಮೂಲಕ ಬಂಗಾರದ ಚೈನ್‌ನ್ನು

**ಕಿತ್ತುಕೊಂಡು ಹೋಗಿದ್ದು, ಈ ಪ್ರಕಾರ ಆರೋಪಿಗಳಾದ ನೀವುಗಳು ಭಾ.ದಂ.ಸಂ. ಕಲಂ** 392 **ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.**

ಈ ಮೇಲೆ ಹೇಳಿದ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು ಈ ಆರೋಪಗಳಿಗಾಗಿ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**(**ಈ ದೋಷಾರೋಪಣೆಯನ್ನು ಈ ದಿನ ಸಾಕ್ಷಿಗೆ ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿದ್ದು ಅದನ್ನು ಅವರು ಅರ್ಥ ಮಾಡಿಕೊಂಡು ಉತ್ತರಿಸಿರುತ್ತಾರೆ ಎಂದು ದೃಢೀಕರಿಸಿರುತ್ತೇನೆ.**)**

**ದಿನಾಂಕಃ 07.10.2024**

**ಸಹಿ/-**
**(ಚಂದ್ರಶೇಖರ್ ಅಲಬೂರ್)**
**C/c ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ಬಂಗಾರಪೇಟೆ**